**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಚಿದಾನಂದ ಎಂ ಗೌಡ ರವರು ನಿಯಮ-72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸಂಖ್ಯೆ:91ಕ್ಕೆ ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಉತ್ತರ.**

**ಸೂಚನೆ :**

ಇತ್ತೀಚಿಗೆ ರಾಜ್ಯದ ಎಲ್ಲಾ ಆಸ್ತಿಗಳ ನೊಂದಣಿಗೆ ಇ-ಆಸ್ತಿ ಕಡ್ಡಾಯ ಮಾಡಿರುತ್ತದೆ. ಆದರೆ ಕಾರ್ಯಾಲಯಗಳಲ್ಲಿ ಇ-ಆಸ್ತಿ ನೀಡಲು ವಿಳಂಬ ಮಾಡುತ್ತಾ ಅಧಿಕಾರಿಗಳು ಮತ್ತು ನೌಕರರು ಸಾರ್ವಜನಿಕರಿಗೆ ಸಾಕಷ್ಟು ತೊಂದರೆ ನೀಡುತ್ತಿದ್ದಾರೆ. ಇದರಿಂದ ರಾಜಸ್ವ ಸಹ ನಿರೀಕ್ಷಿತ ಮಟ್ಟದಲ್ಲಿ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಗ್ರಾಮಠಾಣಾ ಆಸ್ತಿಗಳಿಗೆ ನಮೂನೆ-9 ರ ಅಸ್ತಿಗಳಿಗೆ ಭೂ ಮಾಪನಾ ಇಲಾಖೆಯಿಂದ ಅಳತೆ/ಸ್ಕೆಚ್ ಪಡೆದು ಇ-ಖಾತಾ ವಿತರಿಸುತ್ತಾರೆ. ಆದರೆ ಉನ್ನತೀಕರಣಗೊಂಡ ನಂತರ ಪೌರಾಡಳಿತ ಇಲಾಖೆಯವರು ಇ-ಆಸ್ತಿ ವಿತರಣೆಗೆ ಗ್ರಾಮಠಾಣಾ ವ್ಯಾಪ್ತಿಯ ಜನತೆಯಿಂದ ಹಲವು ದಾಖಲಾತಿಗಳನ್ನು ಕೇಳಿ ಇ-ಆಸ್ತಿ ನೀಡದೆ ತೊಂದರೆ ನೀಡುತ್ತಿದ್ದಾರೆ. ಈ ಹಿಂದೆ ಗ್ರಾಮ ಪಂಚಾಯತಿಯಿಂದ ನೀಡಿದ ಇ-ಖಾತಾಗಳನ್ನು ಸಹ ಇ-ಆಸ್ತಿಯಾಗಿ ಪರಿವರ್ತಿಸಿರುವುದಿಲ್ಲ.

ಕೆಲವು ಕಾರ್ಯಾಲಯಗಳಲ್ಲಿ ಅನಗತ್ಯವಾಗಿ ವಿಳಂಬ ಮಾಡುವುದು ಸುತ್ತೋಲೆಯಲ್ಲಿ ಇಲ್ಲದ ಮತ್ತು ಅಗತ್ಯವಿಲ್ಲದ ಹಲವು ದಾಖಲಾತಿಗಳನ್ನು ಕೇಳಿ ಸಾರ್ವಜನಿಕರಿಗೆ ಇ-ಅಸ್ತಿ ನೀಡದೆ ವಿಳಂಬ ಮಾಡುವುದು ಹಣಕ್ಕೆ ಬೇಡಿಕೆಯಿಡುವುದು. ನೊಂದಣಿ ಸಲುವಾಗಿ ಒಂದು ದಿನದ ಇ-ಆಸ್ತಿ ನೀಡಿ, ನೊಂದಣಿ ನಂತರ ರದ್ದುಮಾಡುವುದು. ಈ ರೀತಿಯ ಅಕ್ರಮಗಳು ನಡೆಯುತ್ತಿವೆ. ಇ-ಆಸ್ತಿ ವಿತರಣೆಗೆ ಭೂ ಮಾಪನಾ ಇಲಾಖೆಯಿಂದ ಮಾಹಿತಿ ಪಡೆದು ಸ್ಪಷ್ಟವಾದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಬೇಕು. ಪೌರಾಡಳಿತ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಅಗತ್ಯ ತರಬೇತಿ ನೀಡಬೇಕು ಎನ್ನುವ ವಿಷಯದ ಬಗ್ಗೆ ಮಾನ್ಯ ಪೌರಾಡಳಿತ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಡಿಎಂಎ 29 ಪಿಟಿಐಎಸ್/2015-16 ದಿನಾಂಕ: 20-04-2016ರಲ್ಲಿ ಕೈಬರಹದ ನಮೂನೆ-3 ನೀಡುವುದನ್ನು ದಿನಾಂಕ:02.05.2016 ರಿಂದ ಜಾರಿಗೆ ಬರುವಂತೆ ನಿಷೇಧಿಸಿ, ಇ-ಆಸ್ತಿ ತಂತ್ರಾಂಶದ ಮೂಲಕ ನಮೂನೆ-3 ಸೃಜಿಸಿ ನೀಡಲು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿರುತ್ತದೆ.

ಸದರಿ ಸುತ್ತೋಲೆಯಲ್ಲಿ ಇ-ಆಸ್ತಿ ತಂತ್ರಾಂಶದಲ್ಲಿ ನಮೂನೆ-3 ಸೃಜಿಸಲು ಪಡೆಯಬೇಕಾದ ದಾಖಲೆಗಳ ವಿವರವನ್ನು ವಿವರಿಸಲಾಗಿದೆ.

ಗ್ರಾಮ ಠಾಣಾ ಆಸ್ತಿಗಳಿಗೆ ಇ-ಆಸ್ತಿ ತಂತ್ರಾಂಶದಲ್ಲಿ ನಮೂನೆ-3 ಸೃಜಿಸಲು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಸ್ವತ್ತು ಇರುವ ಬಗ್ಗೆ ಗ್ರಾಮಠಾಣಾ ವ್ಯಾಪ್ತಿಯಲ್ಲಿರುವ ನಕ್ಷೆಯನ್ನು ಮಾತ್ರ ಸಲ್ಲಿಸಬೇಕಾಗಿರುತ್ತದೆ. ಗ್ರಾಮಠಾಣಾ ವ್ಯಾಪ್ತಿಯಲ್ಲಿರುವ ಸ್ವತ್ತುಗಳಿಗೆ ಬೇರೆ ಯಾವುದೇ ದಾಖಲೆಗಳನ್ನು ಪಡೆಯಲು ತಿಳಿಸಿರುವುದಿಲ್ಲ.

ನಗರ ಸ್ಥಳೀಯ ಸಂಸ್ಥೆಗಳು ಇ-ಆಸ್ತಿ ತಂತ್ರಾಂಶದ ಮೂಲಕ ಆಸ್ತಿಗಳ ಡಿಜಿಟಲೀಕರಣ, ಆಸ್ತಿ ಮಾಲೀಕತ್ವ ಹಕ್ಕು ವರ್ಗಾವಣೆ ಮತ್ತು ಡಿಜಿಟಲ್ ಸಹಿಯುಳ್ಳ ನಮೂನೆ-3/2 ರನ್ನು ಸೃಜಿಸಲಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆಗಳು 19.25 ಲಕ್ಷ ಆಸ್ತಿಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಸೃಜನೆ ಮಾಡಿದ್ದು, ಸುಮಾರು 35 % ಆಸ್ತಿಗಳನ್ನು ಇ-ಆಸ್ತಿಯಲ್ಲಿ ದಾಖಲಿಸಲಾಗಿದೆ.

ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: 1058555/DMA/DEV/KHTA/20/2023 ದಿನಾಂಕ: 01.08.2023 ರಲ್ಲಿ ಇ-ಆಸ್ತಿ ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹಾಗೂ ಸಾರ್ವಜನಿಕರಿಗೆ ತ್ವರಿತವಾಗಿ ಸೇವೆಯನ್ನು ಒದಗಿಸುವ ಉದ್ದೇಶದಿಂದ ಕಾರ್ಯವಿಧಾನವನ್ನು ಸರಳೀಕರಣಗೊಳಿಸಲಾಗಿರುತ್ತದೆ.

ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಇ-ಆಸ್ತಿ ತಂತ್ರಾಂಶದಲ್ಲಿ ಏಕರೂಪದ ಕಾರ್ಯ ಹರಿವನ್ನು (workflow) ಅಳವಡಿಸಲಾಗಿದೆ ಹಾಗೂ ಅರ್ಜಿಗಳ ನಿರ್ವಹಣೆಯನ್ನು ವಿಲೇ ಮಾಡಲು ಅಧಿಕಾರಿ / ಸಿಬ್ಬಂದಿಗಳಿಗೆ ಕಾಲಾವಧಿಯನ್ನು ನಿಗಧಿಪಡಿಸಲಾಗಿದ್ದು, ಸದರಿ ಅವಧಿಯಲ್ಲಿ ವಿಲೇ ಮಾಡದಿದ್ದಲ್ಲಿ ತಂತ್ರಾಂಶದಲ್ಲಿ ಸ್ವಯಂಚಾಲಿತವಾಗಿ ಅರ್ಜಿಯು ರವಾನೆಯಾಗುವಂತೆ ಮಾಡಲಾಗಿದೆ. ಅಧಿಕಾರಿ / ಸಿಬ್ಬಂದಿಗಳು ತಂತ್ರಾಂಶದಲ್ಲಿ ಅರ್ಜಿಗಳನ್ನು First in First out (FIFO) ಮಾದರಿಯಲ್ಲಿ ವಿಲೇ ಮಾಡುವಂತೆ ತಂತ್ರಾಂಶ ಸಿದ್ಧಪಡಿಸಲಾಗಿದೆ.

ಗ್ರಾಮಠಾಣಾ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಖಾತಾ ನೀಡಲು ಯಾವುದೇ ನಿರ್ಬಂಧ ಇರುವುದಿಲ್ಲ ಮತ್ತು ಸುತ್ತೋಲೆ ಸಂಖ್ಯೆ: ಡಿಎಂಎ 29 ಪಿಟಿಐಎಸ್/2015-16 ದಿನಾಂಕ: 20-04-2016 ರಲ್ಲಿ ನಿರ್ದೇಶನಾಲಯದ ಸುತ್ತೋಲೆಯಂತೆ ನಮೂನೆ-3 ನೀಡಲಾಗುತ್ತಿದೆ.

ಸ್ವತ್ತಿನ ಮಾಲೀಕರು ಅಗತ್ಯ ದಾಖಲೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಿ, 07 ದಿನಗಳೊಳಗಾಗಿ ನಮೂನೆ-3 ಪ್ರತಿ ಪಡೆಯಬಹುದಾಗಿರುತ್ತದೆ.

ಗ್ರಾಮಠಾಣಾ ಆಸ್ತಿಗಳಿಗೆ ವಿಳಂಬ ಮಾಡುತ್ತಿರುವ ಬಗ್ಗೆ ನಿರ್ದಿಷ್ಟ ದೂರುಗಳು ಸ್ವೀಕೃತವಾಗಿರುವುದಿಲ್ಲ. ಅಂತಹ ಪ್ರಕರಣಗಳಿದ್ದಲ್ಲಿ ಕಾರಣರಾದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು

**ಇ-ಸಂಖ್ಯೆ: ನಅಇ 271 ಜಿಇಎಲ್ 2024**

**(ರಹೀಂ ಖಾನ್)**
**ಪೌರಾಡಳಿತ ಮತ್ತು ಹಜ್ ಸಚಿವರು**